**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC 146./2022**

ಸಾಕ್ಷಿದಾರರ ಹೆಸರು : ಲೋಕೇಶ

ತಂದೆಯ/ಗಂಡನ ಹೆಸರು : ಮಹಾಂತೇಶ

ವಯಸ್ಸು : 36 ವರ್ಷ

ಉದ್ಯೋಗ : ಹದಡಿ ಗ್ರಾಮ

ವಾಸ ಸ್ಥಳ :

ಪಿ.ಡಬ್ಲ್ಯೂ 5

ಸಿ.ಡಬ್ಲ್ಯೂ 4

ದಿ: 15-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾಃ 5 ರವರು ಪರಿಚಯ ನನಗೆ ಇದೆ. ಈಗ ತೋರಿಸಿದ ಪೋಟೋದಲ್ಲಿ ನಾನು ಇದ್ದೇನೆ ಪೋಟೋವನ್ನು ನಿಪಿ -15 ಎಂದು ಗುರುತಿಸಲಾಯಿತು. ನಿಪಿ - 15 ನ್ನು ಆಲೂರು ಬಳಿಯ ಗೋಡೋನ್ ಬಳಿ ತೆಗೆದಿರುತ್ತಾರೆ. ಆ ದಿನ ನನ್ನನ್ನು ಮತ್ತು ಚಾಸಾ5 ರವರನ್ನು ಕರೆಸಿದಾಗ ಬೇರೆ ಅಧಿಕಾರಿಗಳು ಇದ್ದರು. ಗೋಡೋನ್ ನಲ್ಲಿ ಬಾಂಗ್ ತರಹ ವಸ್ತುಗಳು ಇದ್ದವು ಎಂದು ಗೊತ್ತಾಯಿತು. ಅವುಗಳನ್ನು ಅಲ್ಲಿಂದ ಆಲೂರು ಬಳಿ ಅವುಗಳನ್ನು ತೆಗೆದುಕೊಂಡು ಹೋಗಿ ನಾಶಪಡಿಸಿದರು. ಅಧಿಕಾರಿಗಳು ಅವುಗಳನ್ನು ಪರಿಶೀಲಿಸಿ ಅವುಗಳು ಬಾಂಬ್ ತರಹದ ವಸ್ತುಗಳು ಎಂದು ತಿಳಿಸಿದರು. ಪೋಲೀಸರು ಅಲ್ಲಿ ಅಮಾನತ್ತು ಪಂಚನಾಮೆ ಮಾಡಿದರು, ಅದಕ್ಕೆ ನಾನು ಸಹಿ ಮಾಡಿದೆ. ಈಗ ಸದರಿ ಅಮಾನತ್ತು ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ-16 ಎಂದು ಅದರಲ್ಲಿನ ನನ್ನ ಸಹಿಯನ್ನು

ನಿಪಿ-16(ಎ) ಎಂದು ಗುರುತಿಸಲಾಯಿತು. ಆ ದಿನ ಪೋಲೀಸರು 8-10 ವಸ್ತುಗಳನ್ನು ಅಮಾನತ್ತು ಮಾಡಿಕೊಂಡು ವಶಪಡಿಸಿಕೊಂಡರು.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿರುತ್ತಾರೆ. ವಾದ ಕೇಳಿ ದಾಖಲೆ ಪರಿಶೀಲಿಸಿ ಅನುಮತಿ ಕೊಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**:

2. ಆ ದಿನ ತಜ್ಞರು ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಸ್ಫೋಟಕ ವಸ್ತುಗಳು ಅಂತ ಹೇಳಿದರು ಅದನ್ನು ಅಮಾನತ್ತುಮಾಡಿಕೊಂಡರು ಎಂದರೆ ನಿಜ. ಅಮಾನತ್ತುಪಡಿಸಿಕೊಂಡ ವಸ್ತುಗಳ ಸಂಬಂಧಪಟ್ಟಂತೆ ಸ್ಯಾಂಪಲ್ ನ್ನು ಸಂಗ್ರಹಿತಿ ಉಳಿದವುಗಳನ್ನು ನಾಶಪಡಿಸಿದರು ಎಂದರೆ ನಿಜ. ಅದರಂತೆ ಪೋಲೀಸರು ಮಹಜರು ಮಾಡಿ ಪೋಟೋ ತೆಗೆದರು ಎಂದರೆ ನಿಜ.

**<u>ಪಾಟೀ ಸವಾಲುಃ ಶ್ರೀ .BBR , ವಕೀಲರಿಂದ ಆರೋಪಿತರ ಪರವಾಗಿ</u>**:

3. ಸದರಿ ಮಹಜರನ್ನು ನಾನು ಓದಿ ತಿಳಿಸಿದಿಲ್ಲ, ಪೋಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ. ಆ ದಿನ ನಾನು ಒಂದೇ ಸಹಿ ಮಾಡಿದ್ದೇನೆ. ಆ ದಿನ ಪೋಟೋಗೆ ಪೋಲೀಸರು ನಿಂತಿಕೋ ಎಂದರೆ ನಿಂತೆ. ಯಾವ ಕಾರಣಕ್ಕೆ ಪೋಟೋ ತೆಗೆದರು ಎಂದು ನನಗೆ ಗೊತ್ತಿಲ್ಲ. ತಜ್ಞರು ಹೇಳಿದ ನಂತರ ಅಲ್ಲಿ ನನಗೆ ಸ್ಫೋಟಕ ವಸ್ತು ಇದೆ ಎಂದು ಗೊತ್ತಾಯಿತು ಎಂದರೆ ನಿಜ. ಸ್ಫೋಟಕ ಯಾವುದರದು ಎಂದು ನನಗೆ ಗೊತಿತಲ್ಲ. ಪೋಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತ ನಂ 1 ರವರು ಗೈರು ಹಾಜರಿದ್ದು ಅವರನ್ನು ಗುರುತಿಸಲು ಯಾವುದೇ ತಕರಾರು ಎಲ್ಲ ಎಂದು ಆರೋಪಿತರ ಪರ ವಕೀಲರು ಹೇಳಿರುತ್ತಾರೆ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.